288

<u>ಕರ್ನಾಟಕ ಸರ್ಕಾರ</u>

<u>ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.</u>

<u>ಸಂ.ಕಂ/ಹಬ/ವಿವಾದ/25/2014-15</u> ದಿ:25-07-2016

**ವಾದಿಗಳು** **ವಿರುದ್ದ** **ಪ್ರತಿವಾದಿಗಳು**

**1.ರಾಮನಮಾಲಿ ತಂದೆ ಹಿರೇತಾಯಗ @ ತಾಯಪ್ಪ, 2 ನೇ ಕ್ರಾಸ್. 9 ನೇ ವಾರ್ಡ್ ಸಿದ್ದಲಿಂಗಪ್ಪ ಚೌಕಿ. ಲಂಬಾಣಿ ಏರಿಯಾ, ಹೊಸಪೇಟೆ.**

**2.ರಾಮಲಿಂಗಾರೆಡ್ಡಿ ತಂದೆ ವೆಂಕನಗೌಡ ಕೊತ್ತಲಚಿಂತ ಗ್ರಾಮ.**

**ಎನ್.ಯಂಕೋಬ ತಂದೆ ಲೇಟ್ –ನಾಗಪ್ಪ. ನಂ:76 ವೆಂಕಟಾಪುರ ತಾ:ಹೊಸಪೇಟೆ. ಜಿ:ಬಳ್ಳಾರಿ**

**ದಾವಾ ಜಮೀನಿನ ವಿವರ**

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಕೊತ್ತಲಚಿಂತ | 30/ಸಿ/1 | 3-22 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಕೊತ್ತಲಚಿಂತ ಗ್ರಾಮದ ಸ,ನಂ.30/ಸಿ/1 ವಿ:3-22 ಎಕ್ರೆ ಜಮೀನಿಗೆ ನೋಂದಣಿ ಕ್ರಯಪತ್ರ ಸಂಖ್ಯೆ:72/2014-15 ದಿನಾಂಕ:05-04-2014 ರ ಪ್ರಕಾರ ಹಾಲಿ ಪಟ್ಟಾದಾರರಾದ **ರಾಮನಮಾಲಿ ತಂದೆ ಲೇಟ್ ಹಿರೇತಾಯಿಗ ಉರುಫ್ ತಾಯಪ್ಪ** ಇವರಿಂದ **ರಾಮಲಿಂಗಾರೆಡ್ಡಿ ತಂದೆ ವೆಂಕನಗೌಡ** ಇವರು ಕ್ರಯ ನೋಂದಣಿ ಹೊಂದಿದ್ದು, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಕೊತ್ತಲಚಿಂತ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ **ಎನ್.ವೆಂಕೋಬ ತಂದೆ ಲೇಟ್ ನಾಗಪ್ಪ** ಇವರು "ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು" ದಿನಾಂಕ:25-04-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರು ಸದ್ರಿ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಹ,ಬ.ಸಂಖ್ಯೆ:29/2013-14 ದಿನಾಂಕ:28-05-2014 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:21-07-2014 ರಿಂದ 11-04-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ಮತ್ತು ಉಭಯತರ ವಕೀಲರು ವಿಚಾರಣೆಗೆ ಹಾಜರಾಗಿ, ತಮ್ಮ ಪಕ್ಷಗಾರರ ಪರ ವಕಾಲತ್ ಸಲ್ಲಿಸಿ, ಲಿಖಿತ ವಾದ ಮಂಡಿಸಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ಪ್ರತಿವಾದಿ ಯ ಹೇಳಿಕೆ ಪ್ರಕಾರ "ಸದ್ರಿ ಜಮೀನು ತಮ್ಮ ಪೂರ್ವಜರ ಆಸ್ತಿಯಾಗಿದ್ದು, ತಾವುಗಳು ಪಾಲು ವಿಭಾಗ ಮಾಡಿಕೊಂಡಿರುವುದಿಲ್ಲ, ಸದ್ರಿ ಜಮೀನನ್ನು ನೋಂದಣಿ ಕ್ರಯಪತ್ರದ ಮೂಲಕ ಮಾರಾಟ ಮಾಡಿರುವುದು ಕಾನೂನು ಬಾಹಿರವಾಗಿರುತ್ತದೆ, ಹಾಗೂ ತಮಗೆ ಯಾವುದೇ ನೋಟೀಸು ಜಾರಿಯಾಗಿರುವುದಿಲ್ಲ, ಆದ್ದರಿಂದ ಸದ್ರಿ ಹಕ್ಕು ಬದಲಾವಣೆ ಮಾಡಬಾರದೆಂದು ಹೇಳಿಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

(286)

ವಾದಿ (1) ರವರ ಹೇಳಿಕೆ ಪ್ರಕಾರ "ದಾವಾ ಆಸ್ತಿಯು ಈ ಹಿಂದೆ ತನ್ನ ತಾಯಿ ತಿಪ್ಪಮ್ಮ ಹೆಸರಿಗೆ ಇದ್ದು, ಈ ಮೊದಲು ಮಾನ್ಯ ಸಹಾಯಕ ಆಯುಕ್ತರು ಬಳ್ಳಾರಿ ಇವರ ನ್ಯಾಯಾಲಯ ಪ್ರಕರಣ ಸಂ:ಕಂ:ಅಪೀಲು :135/2012-13 ದಿ:29-01-2013 ರ ಪ್ರಕಾರ ಕರ್ನಾಟಕ ಭೂ-ಕಂದಾಯ ಕಾಯ್ದೆ ಕಲಂ 129 ರಡಿ ಪಾಲು ವಿಭಾಗ ಪತ್ರದಂತೆ ಅರ್ಜಿ ಪಡೆದು ಹಕ್ಕು ಬದಲಾವಣೆ ಪ್ರಕ್ರಿಯೆ ಜರುಗಿಸಲು ಆದೇಶಿಸಿದಂತೆ, ತಮ್ಮ ಕುಟುಂಬದವರು ಮಾಡಿಕೊಂಡ ಪಾಲು ವಿಭಾಗ ಪ್ರಕಾರ ತನ್ನ ಹೆಸರಿಗೆ ಹ.ಬ.ಸಂಖ್ಯೆ:14/2013-14 ದಿನಾಂಕ:20-01-2014 ರ ಪ್ರಕಾರ ಹಕ್ಕು ಹೊಂದಿರುತ್ತೇನೆ, ಅದೇರೀತಿ ನೋಂದಣಿ ಕ್ರಯಪತ್ರ ಸಂಖ್ಯೆ:72/2014-15 ದಿನಾಂಕ:05-04-2014 ರ ಪ್ರಕಾರ ಪ್ರಸ್ತುತ ರಾಮಲಿಂಗಾರೆಡ್ಡಿ ಇವರಿಗೆ ಮಾರಾಟ ಮಾಡಿರುತ್ತೇನೆ, ತಕರಾರು ಸಲ್ಲಿಸಿದ ಎನ್.ವೆಂಕೋಬ ಇವರು ಯಾವುದೇ ಪೂರಕ ದಾಖಲೆಗಳನ್ನು ಸಲ್ಲಿಸದೇ ತಕರಾರು ಸಲ್ಲಿಸಿರುವುದು ಕಾನೂನು ಬಾಹಿರವಾಗಿರುತ್ತದೆ. ಅಲ್ಲದೇ ಇವರು ಸಲ್ಲಿಸಿದ ದಾಖಲೆಗಳು ಸೃಷ್ಟಿ ಮಾಡಿದ ದಾಖಲೆಗಳಿರುತ್ತವೆ. ಆದ್ದರಿಂದ ಕ್ರಯಪತ್ರದಂತೆ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಹೇಳಿಕೆ ನೀಡಿರುತ್ತಾರೆ.

ಒಟ್ಟಾರೆ, ಸದ್ರಿ ಪ್ರಕರಣದಲ್ಲಿ ವಾದಿ/ಪ್ರತಿವಾದಿಗಳ ಹೇಳಿಕೆ ಮತ್ತು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಪ್ರತಿವಾದಿಯು ಸದ್ರಿ ಜಮೀನಿನ ಹಕ್ಕಿನ ಬಗ್ಗೆ ಸಂಭಂದಿಸಿ ತಮ್ಮ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲವೆಂದು ತಿಳಿಸಿದ್ದು, ವಾದಿಯು ದಾವಾ ಆಸ್ತಿಯನ್ನು ನೋಂದಣಿ ದಸ್ತಾವೇಜು ಪ್ರಕಾರ ಮಾರಾಟ ಮಾಡಿರುವುದರಿಂದ, ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128, 129 ರ ಅಡಿ, ನೋಂದಣಿ ಕ್ರಯಪತ್ರ ಸಂಖ್ಯೆ:72/2014-15 ದಿನಾಂಕ:05-04-2014 ರ ಪ್ರಕಾರ ಕ್ರಮ ಜರುಗಿಸಬೇಕಾಗಿರುವುದರಿಂದ, ಮತ್ತು ಪ್ರತಿವಾದಿಯು ಸೂಕ್ತ ದಾಖಲೆಗಳೊಂದಿಗೆ ಸಿವಿಲ್ ನ್ಯಾಯಾಲಯ ಮೊರೆಹೋಗಿ ಪರಿಹಾರ ಕಂಡುಕೊಳ್ಳಲು ಸೂಚಿಸಿ, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/25/2014-15** **ದಿ:25-07-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಕೊತ್ತಲಚಿಂತ ಗ್ರಾಮದ ಸ,ನಂ.30/ಸಿ/1 ವಿ:3-22 ಎಕ್ರೆ ಜಮೀನಿಗೆ ನೋಂದಣಿ ಕ್ರಯಪತ್ರ ಸಂಖ್ಯೆ:72/2014-15 ದಿನಾಂಕ:05-04-2014 ರ ಪ್ರಕಾರ ಹಾಲಿ ಪಟ್ಟಾದಾರರಾದ **ರಾಮನಮಾಲಿ ತಂದೆ ಲೇಟ್ ಹಿರೇತಾಯಿಗ ಉರೂಫ್ ತಾಯಪ್ಪ** ಇವರಿಂದ **ರಾಮಲಿಂಗಾರೆಡ್ಡಿ ತಂದೆ ವೆಂಕನಗೌಡ** ಇವರು ನೋಂದಣಿ ದಸ್ತಾವೇಜು ಪ್ರಕಾರ ಹೊಂದಿದ ಕ್ರಯಪತ್ರದಂತೆ ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ. ಅದೇರೀತಿ ಪ್ರತಿವಾದಿಯು ಈ ಆದೇಶದಿಂದ ಬಾಧಿತರಾಗಿದ್ದಲ್ಲಿ ಸಿವಿಲ್ ನ್ಯಾಯಾಲಯ ಮೊರೆಹೋಗಿ ಪರಿಹಾರ ಕಂಡುಕೊಳ್ಳಲು ತಿಳಿಸಲಾಗಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:25-07-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

**ತಹಶೀಲ್ದಾರರು,ಸಿರುಗುಪ್ಪ**

ರವಾನಿಸಿದೆ

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ರಾಮಲಿಂಗಾರೆಡ್ಡಿ